ಶ್ರೀ ಕೆ. ಕಂಠಾಲ.—ಸ್ವಾಮಿ ಇನ್ನು ೧೦ ಜನರಿಗೆ ಹಣ ದೊರೆಯದೆ ಇರುವುದಕ್ಕೆ ಕಾರಣವೇನು ? ಇದಕ್ಕೆ ಸರ್ಕಾರ ಜವಾಬ್ದಾರಿಯೋ ಅಥವಾ ಅಧಿಕಾರಿಗಳು ಜವಾಬ್ದಾರಿಯೋ ?

ಶ್ರೀ ವಿ. ಎಲ್. ಪಾಟೀಲ್.—ಇದಕ್ಕೆ ಸರ್ಕಾರ ಕಾರಣವಲ್ಲ.

ಶ್ರೀ ಆರ್ ವೆಂಕಟರಾವಯ್ಯ.—ಸ್ವಾಮಿ ಮೂರು ನಾಲ್ಕು ತಿಂಗಳೊಳಗಾಗಿ ಹಣ ಪಾವತಿ ಮಾಡುವಂತೆ ಒಂದು ನಿರ್ಬಂಧ ಹಾಕಿದರೆ ಒಳ್ಳೆಯದಲ್ಲವೆ ?

ಹೊಸದುರ್ಗ ತಾಲ್ಲೂಕಿನಲ್ಲಿ ಅಂಗವಿಕಲರು, ವೃದ್ಧರು, ಮತ್ತು ವಿಧವೆಯರಿಗೆ ಮಾಶಾಸನವನ್ನು ಮಂಜೂರು ಮಾಡುವ ಬಗ್ಗೆ

೩೭೪. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ೧೯೫೩–೫೪ ಮತ್ತು ೧೯೫೪–೫೫ನೇ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಜನ ಅಂಗವಿಕಲರು, ವೃದ್ಧರು, ಮತ್ತು ವಿಧವೆಯರಿಗೆ ಮಾಶಾಸನವನ್ನು ಮಂಜೂರು ಮಾಡಲಾಗಿದೆ ?

ಆ) ಸದರಿ ಮಂಜೂರಾತಿಯಲ್ಲಿ ಲೋಪದೋಷಗಳಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೆ. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರ ಕ್ರಮವೇನು ?

ಇ) ಕೋಡಿಹಳ್ಳಿ ಗ್ರಾಮದ ಒಬ್ಬ ಮಹಿಳೆಗೆ ಎರಡು ವೇತನಗಳನ್ನು ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ಮತ್ತು ಹಾಗಿದ್ದಲ್ಲಿ ಸದರಿ ಮಹಿಳೆಗೆ ಎಷ್ಟು ತಿಂಗಳಿಂದ ಮೇಲ್ಕಂಡ ವೇತನಗಳು ಸಂದಾಯವಾಗಿದೆ ಮತ್ತು ಇದಕ್ಕೆ ಕಾರಣಕರ್ತರಾರು ?

ಈ) ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಸರಕಾರದವರು ಕ್ರಮ ಕೈಗೊಳ್ಳುವರೇ ?

ಉ) ಕಂದಾಯ ಇಲಾಖೆಯಿಂದ ಕೋಡಿಹಳ್ಳಿ ಗಿರಿಯಮ್ಮನ ಹೆಸರಿಗೆ ಒಂದೇ ದಿನ ತಹಸೀಲ್ದಾರ್ ಮಂಜೂರಾತಿ ಮಾಡಿರುವ ಪತ್ರ ಸಬ್ ಟ್ರೆಜರಿಗೆ ಎರಡು ದಿನಾಂಕದಲ್ಲಿ ಹಣ ಪಾವತಿಗೆ ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಊ) ಮಾಸಿಕ ವೇತನ ನೀಡುವಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ನಿಧಾನವಾಗಲು ಕಾರಣಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

	೧೯೫೩–೫೪	೧೯೫೪–೫೫
ಅ) ಅಂಗವಿಕಲ ವೇತನ	೨೭೨	೧೯೦
ವೃದ್ಧಾಪ್ಯವೇತನ	೫೭೨	೫೬೩
ನಿರ್ಗತಿಕ ವಿಧವೆಯರ ವೇತನ	—	೮೯೫

ಆ) ಇಲ್ಲ.

ಇ) ಕೋಡಿಹಳ್ಳಿ ಗ್ರಾಮದಲ್ಲಿ ಒಬ್ಬಳೆ ಮಹಿಳೆಗೆ ಎರಡು ವೇತನವನ್ನು ಮಂಜೂರು ಮಾಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಮೇಲೆ ಹೇಳಿರುವ ಉತ್ತರದ ಪ್ರಕಾರ ಇದು ಉದ್ಭವಿಸುವುದಿಲ್ಲ.

ಉ) ಇಲ್ಲ.

ಊ) ಮಂಜೂರಾದ ಆದೇಶವನ್ನು ಉಪ ಖಜಾನೆಗೆ ಒಂದು ವಾರದೊಳಗಾಗಿ ಪಾವತಿ ಮಾಡುವುದಕ್ಕೆ ಕಳುಹಿಸಲಾಗುವುದು.

ಶ್ರೀ ಜಿ. ರಾಮದಾಸ್.—ಸನ್ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿರತಕ್ಕ ವಿವಿಧ ಜನಾಂಗದವರಿಗೆ ಎಷ್ಟು ವೃದ್ಧಾಪ್ಯ ವೇತನವನ್ನು ಕೊಟ್ಟಿದ್ದೀರಿ ? ಇದರಲ್ಲಿ ಅಂಗವಿಕಲರಿಗೆ, ವಿಧವೆಯರಿಗೆ ಹಾಗೂ ಹೆರಿಗೆ ಭತ್ಯವನ್ನು ಎಷ್ಟು ಕೊಟ್ಟಿದ್ದೀರಿ ಎನ್ನುವುದಕ್ಕೆ ಅಂಕಿಅಂಶಗಳನ್ನು ಕೊಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ವಿಧವೆಯರು ಎಷ್ಟು ಎಂದು ಕೇಳಿದ್ದಾರೆಯೇ ವಿನಹಃ ಹೆರಿಗೆ ಭತ್ಯ ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂದು ಕೇಳಿಲ್ಲ.

ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೇ ಈ ಒಂದು ಸೌಲಭ್ಯ ಆಸ್ತಿಪಾಸ್ತಿ ಇಟ್ಟುಕೊಂಡಿರುವವರಿಗೂ ಕೂಡ ಲಭಿಸಿದೆ. ಆದ್ದರಿಂದ ನಾನು ಈ ಪ್ರಶ್ನೆಯನ್ನು ಮಾಡಬೇಕಾಯಿತು. ಆಸ್ತಿಪಾಸ್ತಿ ಇಟ್ಟುಕೊಂಡು ಈ ಸೌಲಭ್ಯವನ್ನು ಪಡೆಯುತ್ತಿರುವವರಿಗೆ ಈ ಸೌಲಭ್ಯವನ್ನು ರದ್ದು ಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಇವರ ಬಗ್ಗೆ ವಿವರವಾದ ಮಾಹಿತಿ ಕೊಟ್ಟರೆ ರದ್ದು ಮಾಡಬಹುದು.

ಕಾಪು ಕ್ಷೇತ್ರದಲ್ಲಿ ಮಂಜೂರಾದ ಲೋಕೋಪಯೋಗಿ ಕಾಮಗಾರಿಗಳ ಜಾರಿಯಲ್ಲಿ ತರುವ ವಿಳಂಬ ಕುರಿತು.

೧೫೫. ಶ್ರೀ ವಸಂತ ವಿ. ಸಾಲಿಯಾನ್ (ಕಾಪು).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದಲ್ಲಿ ಮಂಜೂರಾದ ಎಲ್ಲಾ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳೂ ಕಾರ್ಯಾರಂಭಿಸದೆ ತಟಸ್ಥವಾಗಲು ಕಾರಣವೇನು ?

ಆ) ಹೊಸದಾಗಿ ಅಭಿವೃದ್ಧಿ ಕಾಮಗಾರಿಕೆ ಮಂಜೂರಾತಿ ದೊರಕದಿರಲು ಕಾರಣವೇನು ?

ಇ) ಕ್ಷೇತ್ರದಲ್ಲಿ ಅಪೂರ್ಣವಾದ ವಿವಿಧ ಕಾಮಗಾರಿಕಾ ರಸ್ತೆಯನ್ನು ಯಾವಾಗ ಸಂಪೂರ್ಣಗೊಳಿಸುತ್ತೀರಿ?

ಶ್ರೀ ಹೆಚ್.ಡಿ. ದೇವೇಗೌಡ, (ಲೋಕೋಯೋಗಿ ಕಾಡಾ ಮತ್ತು ನೀಲಾವರಿ ಸಚಿವರು).—

ಅ) ಈ ಕ್ಷೇತ್ರದಲ್ಲಿ ಮಂಜೂರಾದ ಲೋಕೋಪಯೋಗಿ ಇಲಾಖೆಯ ಯಾವ ಕಾಮಗಾರಿಗಳೂ ತಟಸ್ಥವಾಗಿಲ್ಲ.

ಆ) ಸಾಕಷ್ಟು ಹಣದ ಲಭ್ಯತೆ ಇಲ್ಲದಿರುವುದರಿಂದ.

ಇ) ಈ ಕ್ಷೇತ್ರದಲ್ಲಿ ಕಾಪು ಪೋಲಿಪ್ಪು ದೀಪಸ್ತಂಭದ ವಿವಿಧ ಕಾಮಗಾರಿಕಾ ರಸ್ತೆ ೧.೬೧ ಕಿ. ಮೀ. ನಲ್ಲಿ ಕೇವಲ ೩೨೫ ಮೀಟರ್ ಉದ್ದವನ್ನು ಹೊರತುಪಡಿಸಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಿದೆ. ಈ ೩೨೫ ಮೀಟರ್ ಉದ್ದ ರಸ್ತೆಯನ್ನು ಭೂ ಸ್ವಾಧೀನ ಸಂಬಂಧವಾದ ಪ್ರಕರಣವೊಂದು ನ್ಯಾಯಾಲಯದಲ್ಲಿ ತೆರವು ಆದ ಮೇಲೆ ಅಗತ್ಯವಾದ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡ ನಂತರ ಪೂರ್ಣಗೊಳಿಸಲಾಗುವುದು.

ಶ್ರೀ ವಸಂತ ವಿ ಸಾಲಿಯಾನ್. —ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನನ್ನ ಒಂದನೇ ಪ್ರಶ್ನೆಗೆ ಉತ್ತರವಾಗಿ ಯಾವ ಕೆಲಸಗಳು ಕೂಡ ತಟಸ್ಥವಾಗಿಲ್ಲವೆಂದು ಹೇಳಿದ್ದಾರೆ. ಆದರೆ ನಾನು ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಮೊದಲನೆಯದಾಗಿ ಹೇಳುವುದಾದರೆ ಯಲ್ಲಮಾರಪುರ, ಅಂಜನಪೂಲ ಮತ್ತು ಆರ್. ಎಲ್, ಜಿ. ಬಿ. ವರ್ಕ್ಸ್‌ನಲ್ಲಿ ಕುರ್ಕಾಲಿನಲ್ಲಿ ಹರಿಜನ ಬಸ್ತಿ ಮತ್ತು ಇನ್ನೂ ಅನೇಕ ಕಡೆ ನೀತುವೆ ಕೆಲಸಗಳು ತಟಸ್ಥವಾಗಿದೆ. ಇನ್ನು ಎರಡನೆಯ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಾಕಷ್ಟು ಹಣವಿಲ್ಲವೆಂದು ಹೇಳಿದ್ದಾರೆ. ಹಣವನ್ನು ಯಾವಾಗ ಒದಗಿಸಿ ಕೊಡುತ್ತೀರಿ ? ಇನ್ನು ಮೂರನೆಯ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದಾರೆ ೩೨೫ ಮೀಟರ್ ಜಾಗದ ರಸ್ತೆಗೆ ಹೈಕೋರ್ಟಿನ ಸ್ಟೇ ಆರ್ಡರ್ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಎರಡೂ